## ನಾಂದಿಪದ



ಕಲೆ: ಜಬೀವುಲ್ಲಾ ಎಂ. ಅಸದ್

# ಬೆಳುದಿಂಗಳ ನೋಡ...

ಜನವರಿ, ವರಕವಿ ಬೇಂದ್ರೆ ಅವರ ನೆನಪಿನ ಬೆಳುದಿಂಗಳಲ್ಲಿ ಮೀಯುವ ಮಾಸ. ಈ ಬೆಳುದಿಂಗಳ ಬೆನ್ನಿಗಿರುವ ತಿಂಗಳು, ರಾಷ್ಟ್ರಕವಿ ಕುವೆಂಪು ಅವರ ನೆನಪನ್ನು ಉದ್ದೀಪಿಸುವಂತಹದ್ದು. ಕನ್ನಡ ಸಾಹಿತ್ಯದ ಈ ಇಬ್ಬರು ಮೇರುಪ್ರತಿಭೆಗಳನ್ನು ನೆನಪಿಸುವ ಬರಹಗಳೊಂದಿಗೆ 2026ರ ಮೊದಲ ಹೆಜ್ಜೆಯನ್ನು 'ಮಯೂರ' ಇರಿಸಿದೆ.

ದೇವನೊಬ್ಬ ನಾಮ ಹಲವು ಎನ್ನುವ ಮಾತು ಬೇಂದ್ರೆ ಅವರಿಗೂ ಅನ್ವಯಿಸುವಂತಹದ್ದು. ಅಂಬಿಕಾತನಯದತ್ತ ಹಾಗೂ ದ.ರಾ. ಬೇಂದ್ರೆ ಎನ್ನುವ ಹೆಸರುಗಳಲ್ಲಿ ವರಕವಿ ನಮಗೆ ಪರಿಚಿತರು. ಆದರೆ, ಅವರ ಬರಹಗಳು ಹತ್ತಾರು ಹೆಸರುಗಳಲ್ಲಿ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಈ ನಾಮವಿಲಾಸದ ಹುಡುಕಾಟದ ಕಲ್ಲುಸಕ್ಕರೆಯಂಥ ಬರಹ, 'ವರಕವಿ ಬೇಂದ್ರೆ: ಕವಿಯೊಬ್ಬ, ನಾಮ ಹಲವು.'

ಕುವೆಂಪು ಸಾಹಿತ್ಯ ವಾಙ್ಮಯದಲ್ಲಿ ಮತ್ತೆ ಮತ್ತೆ ಬೆಳ್ಳಿಚುಕ್ಕಿಯಂತೆ ಎದುರಾಗುವ 'ಓ' ಪುನರಕ್ತಿಯ ಸಾಧ್ಯತೆಗಳ ಕುತೂಹಲಕರ ಹುಡುಕಾಟದ ಬರಹ ಈ ಸಂಚಿಕೆಯ ಮತ್ತೊಂದು ವಿಶೇಷ. ಕುವೆಂಪು ರಾಷ್ಟ್ರೀಯ ಪುರಸ್ಕಾರಕ್ಕೆ ಪಾತ್ರರಾಗಿರುವ, ಕೊಂಕಣಿಯ ಮಹತ್ವದ ಲೇಖಕ ಮಹಾಬಳೇಶ್ವರ ಸೈಲ್ ಅವರ ವ್ಯಕ್ತಿಚಿತ್ರ ಈ ಸಂಚಿಕೆಯ ವೈವಿಧ್ಯಕ್ಕೆ ಪೂರಕವಾಗಿದೆ.

ತುಮಕೂರು ಜಿಲ್ಲೆಯ ವಿಜಯಾ ಮೋಹನ್ ತಮ್ಮ ಕಥೆಗಳ ಮೂಲಕ 'ಮಯೂರ' ಓದುಗರಿಗೆ ಪರಿಚಿತರು. ಅವರ ಇತ್ತೀಚಿನ ಕಥೆಗಳಲ್ಲೊಂದಾದ 'ಡೇಂಗ್ಯು' ಪ್ರಕಟಣೆಯ ಮೂಲಕ, ಇತ್ತೀಚೆಗಷ್ಟೇ ನಿಧನರಾದ ವಿಶಿಷ್ಟ ಕಥೆಗಾರ್ತಿಯನ್ನು 'ಮಯೂರ' ನೆನಪಿಸಿಕೊಳ್ಳುತ್ತಿದೆ.

ಎಲ್ಲ ಸಹೃದಯಿ ಓದುಗರಿಗೆ 'ಮಯೂರ ಬಳಗ'ದಿಂದ ಹೊಸ ವರ್ಷದ ಶುಭಾಶಯಗಳು. ಹೊಸತು ಎನ್ನುವುದು ನಿರಂತರ ಚಲನಶೀಲತೆಯ ಸಂಕೇತ. ರಚನಾತ್ಮಕ ಬದಲಾವಣೆಗೆ ನಿರಂತರವಾಗಿ ಒಡ್ಡಿಕೊಳ್ಳುವ 'ಮಯೂರ'ದ ಪ್ರಯೋಗಶೀಲತೆ ಈ ವರ್ಷವೂ ಮುಂದುವರಿಯಲಿದೆ.

**ಮಯೂರ ಬಳಗ**
editormy@mayura.co.in